# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ.32-2011** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ಸಿ.ಶಿವಣ್ಣ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 13-01-2022. |

**ಪಾಟೀ ಸವಾಲುಃ  ಶ್ರೀ ಎಂ.ಎಸ್  ವಕೀಲರಿಂದಃ**

ನನ್ನ ತಾತನ ಹೆಸರು ನಂಜಯ್ಯ. ನಾವು ಮೂಲತಃ ಕಡಬೂರುನವರು. ನನ್ನ ತಾತನಿಗೆ ನಂಜಯ್ಯ ಹಾಗೂ ಚಿಕ್ಕಗಂಡಯ್ಯ ಎಂಬ ಇಬ್ಬರು ಮಕ್ಕಳು. ನನ್ನ ತಾತ ಮೃತಪಟ್ಟಿರುತ್ತಾರೆ. ಅವರನ್ನು ನಾನು ನೋಡಿಲ್ಲ. ನನ್ನ ತಂದೆ ಚಿಕ್ಕವರಿದ್ದಾಗಲೇ ನನ್ನ ತಾತ ಮೃತಪಟ್ಟಿರುತ್ತಾರೆ. ನನ್ನ ತಂದೆಗೂ ನನ್ನ ದೊಡಪ್ಪನಿಗೆ ವಯಸ್ಸಿನಲ್ಲಿ ಸುಮಾರು 13-15 ವರ್ಷ ಅಂತರ ಇರುತ್ತದೆ. ನನ್ನ ಅಜ್ಜಿಯನ್ನು ಕೂಡ ನಾನು ನೋಡಿಲ್ಲ. ಮೊದಲು ನನ್ನ ತಾತ ಮೃತಪಟ್ಟಿರುತ್ತಾರೆ. ನಂತರ ನನ್ನ ಅಜ್ಜಿ ಮೃತಪಟ್ಟಿರುತ್ತಾರೆ. ನಾನು ಈಗ ನಂಜೀಪುರ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಕಡಬೂರನ್ನು ಬಿಟ್ಟು ವೈಯಕ್ತಿವಾಗಿ ನಂಜೀಪುರಕ್ಕೆ ಬಂದಿರುತ್ತಾರೆ. ನಂಜೀಪುರದಲ್ಲಿ ನಮ್ಮ ತಂದೆಗೆ ಸರ್ಕಾರದವರು ಸುಮಾರು 35-40 ವರ್ಷಗಳ ಹಿಂದೆ ಒಂದು ಮನೆಯನ್ನು ಕೊಟ್ಟಿರುತ್ತಾರೆ. ಈಗ ಆ ಮನೆ ನನ್ನ ತಾಯಿ ಹೆಸರಿನಲ್ಲಿ ಇದೆ. ಸರ್ಕಾರದಿಂದ ಸದರಿ ಮನೆ ನನ್ನ ದೊಡ್ಡಪ್ಪನ ಹೆಸರಿಗೆ ಮಂಜೂರಾಗಿತ್ತು. ನನ್ನ ದೊಡ್ಡಪ್ಪ ಹಾಗೂ ನನ್ನ ತಂದೆ ಇದ್ದರು ವಾಸವಾಗಿದ್ದರು. ಪ್ರತಿವಾದಿಗಳು ಕೂಡ ನಂಜೀಪುರದಲ್ಲಿ ವಾಸವಾಗಿದ್ದಾರೆ. ಆ ಮನೆಯನ್ನು ನಾವು ಹಾಗೂ ನಮ್ಮ ದೊಡ್ಡಪ್ಪ 30 ವರ್ಷದ ಹಿಂದೆ ಭಾಗ ಮಾಡಿಕೊಂಡಿದ್ದೇವೆ, ನಮ್ಮ ಭಾಗಕ್ಕೆ ಬಂದ ಮನೆಯನ್ನು ನಮ್ಮ ತಾಯಿ ಹೆಸರಿನಲ್ಲಿ ಖಾತೆ ಮಾಡಿಸಿದ್ದೇವೆ. ನಾವು ಬೇರೆ  ಬೇರೆಯಾಗಿ ನಮ್ಮ ಭಾಗಕ್ಕೆ ಬಂದ ಮನೆಗೆ ಕಂದಾಯ ಕಟ್ಟಿಕೊಳ್ಳುತ್ತಿದ್ದೇವೆ ಎಂದರೆ ಸರಿ. ನಂಜೀಪುರದ ಮನೆಯನ್ನು ನಾವು ಈ ದಾವೆಯಲ್ಲಿ ಸೇರಿಸಿಲ್ಲ. ಈಗಾಗಲೇ ವಿಭಾಗ ಮಾಡಿಕೊಂಡಿರುವುದರಿಂದ ನಾವು ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ.

2. ದಾವಾ ಸ್ವತ್ತು ಐಟಂ-1 ಮತ್ತು 2 ಸರ್ಕಾರದಿಂದ ನನ್ನ ದೊಡ್ಡಪ್ಪನ ಹೆಸರಿಗೆ ಮಂಜೂರಾಗಿತ್ತು ಎಂದರೆ ಸರಿ. ದಾವಾ ಸ್ವತ್ತುಗಳ ನನ್ನ ದೊಡ್ಡಪ್ಪನಿಗೆ ಮಂಜೂರು ಆಗುವ ಕಾಲಕ್ಕೆ

ಅವರು ಬೇರೆ ವಾಸವಾಗಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತು-1 1952 ರಲ್ಲಿ ನನ್ನ ದೊಡ್ಡಪ್ಪನಿಗೆ ಮಂಜೂರು ಆಗಿತ್ತು ಎಂದರೆ ಸರಿ. ದಾವಾ ಸ್ವತ್ತು-2 1961 ರಲ್ಲಿ ಮಂಜೂರಾಗಿತ್ತು ಎಂದರೆ ಸರಿ. ನಮ್ಮ ದೊಡ್ಡಪ್ಪ ಆತನ ದರ್ದು ನಿಮಿತ್ತ ದಾವಾ ಸ್ವತ್ತು-1 ನ್ನು ಮರಿಸ್ವಾಮಪ್ಪ ಎಂಬುವವರಿಗೆ ಹಾಗೂ ದಾವಾ ಸ್ವತ್ತು-2 ನ್ನು ಮಹದೇವಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಇಬ್ಬರೂ ಸೇರಿ ಮಾರಾಟ ಮಾಡಿದ್ದಾರೆ. ಸದರಿ ಸ್ವತ್ತುಗಳನ್ನು ಮಾರಾಟ ಮಾಡುವ ಕಾಲಕ್ಕೆ ನಾನು ಇನ್ನೂ ಹುಟ್ಟಿರಲಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಸದರಿ ಮಹದೇವಪ್ಪ ಹಾಗೂ ಮರಿಸ್ವಾಮಪ್ಪ ರವರಿಗೆ ಮಾರಾಟ ಮಾಡುವಾಗ ಖರೀದಿದಾರರಾದ ಅವರುಗಳು ನಮ್ಮ ತಂದೆ ಸಹಿಯನ್ನೂ ಕೂಡ ಹಾಕಿಸಿ ಎಂದು ಹೇಳಿದ್ದರಿಂದ ನನ್ನ ತಂದೆ ಕ್ರಯಪತ್ರಗಳಿಗೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ

3. ದಾವಾ ಸ್ವತ್ತು-1 ರ ಕ್ರಯ ಪತ್ರವನ್ನು ರದ್ದು ಪಡಿಸಬೇಕು ಎಂದು ಕೋರಿ ನನ್ನ ದೊಡ್ಡಪ್ಪ ನಂಜನಗೂಡಿನ ಎ.ಸಿ. ನ್ಯಾಯಾಲಯದಲ್ಲಿ ಪಿಟಿಷನ್ ದಾಖಲಿಸಿದ್ದರು ಎಂದರೆ ಸರಿ. ಅದೇ ರೀತಿ ದಾವಾ ಸ್ವತ್ತು-2 ರ ಕ್ರಯ ಪತ್ರವನ್ನು ರದ್ದು ಪಡಿಸಬೇಕು ಎಂದು ಕೋರಿ ನನ್ನ ದೊಡ್ಡಪ್ಪ ಮಹದೇವಪ್ಪ ನವರ ವಿರುದ್ಧ ಹೂಣಸೂರಿನ ಎ.ಸಿ. ನ್ಯಾಯಾಲಯದಲ್ಲಿ ಪಿಟಿಷನ್ ದಾಖಲಿಸಿದ್ದರು ಎಂದರೆ ಸರಿ. ಮೇಲೆ ಹೇಳಿದ ಎರಡೂ ಪ್ರಕರಣಗಳಲ್ಲಿ ನನ್ನ ತಂದೆ ಪಕ್ಷಗಾರರಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಎ.ಸಿ ನ್ಯಾಯಾಲಯಗಳಲ್ಲಿ ಆದ ಆದೇಶದ ಪ್ರತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನೇ ಖುದ್ದು ಅರ್ಜಿ ಸಲ್ಲಿಸಿ ಸದರಿ ಆದೇಶಗಳನ್ನು ಪಡೆದುಕೊಂಡಿರುತ್ತೇನೆ. ಆದೇಶದ ಪ್ರತಿಗಳನ್ನು ಪಡೆದು ನೋಡಿದ ನಂತರ ಕೂಡ ನನಗೆ ಅದರಲ್ಲಿ ನನ್ನ ತಂದೆ ಪಕ್ಷಗಾರಾಗಿದ್ದರೂ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಆದೇಶಗಳು ನಮ್ಮ ಪರ ಆಗಿವೆ ಎಂದು ನನಗೆ ಗೊತ್ತಾಯಿತು. ಸದರಿ ಆದೇಶಗಳ ಮೇಲೆ ಮಹದೇವಪ್ಪ ಆಗಲಿ ಮರಿಸ್ವಾಮಪ್ಪ ಆಗಲಿ ಡಿ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ಸದರಿ ಮಹದೇವಪ್ಪ ಹಾಗೂ ಮರಿಸ್ವಾಮಪ್ಪ ನನ್ನ ದೊಡಪ್ಪನ ವಿರುದ್ಧ ಮಾತ್ರ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡಿ.ಸಿ ನ್ಯಾಯಾಲಯದಲ್ಲಿ ಆದೇಶವನ್ನು ಮರುಪರಿಶೀಲನೆ ಮಾಡುವಂತೆ ಹೇಳಿ ಎ.ಸಿ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹದೇವಪ್ಪ ಮರಿಸ್ವಾಮಪ್ಪ ನವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಕೂಡ ದಾಖಲಿಸಿದ್ದಾರೆ ಎಂದರೆ ಸರಿ. ದಾವಾ ಸ್ವತ್ತು -2 ಕ್ಕೆ ಸಂಬಂಧಪಟ್ಟಂತೆ ಮಹದೇವಪ್ಪ ನವರು ಮಾನ್ಯ ಉಚ್ಚ ನ್ಯಾಯಾಲಯದಿಂದ ಎ.ಸಿ ನ್ಯಾಯಾಲಯಕ್ಕೆ ತರಿಸಿಕೊಂಡು ನನ್ನ ದೊಡಪ್ಪನ ಜೊತೆ ರಾಜಿ ಮಾಡಿಕೊಂಡಿದ್ದಾರೆ, ನನ್ನ ದೊಡ್ಡಪ್ಪ ಕ್ರಯದ ಹಣವನ್ನು ಮಹದೇವಪ್ಪನಿಗೆ ವಾಪಸ್ಸು ನೀಡಿದ

ಜಮೀನನ್ನು ಅವರ ಸ್ವಾಧೀನಕ್ಕೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಮರಿಸ್ವಾಮಪ್ಪ ಹಾಕಿದ್ದ ರಿಟ್ ಪಿಟಿಷನ್ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ವ್ಯಾಜ್ಯ ಸಂಬಂಧ ಸಾಕಷ್ಟು ಖರ್ಚು ವೆಚ್ಚಗಳು ಹಾಗಿವೆ ಎಂದರೆ ಸರಿ. ನನ್ನ ತಂದೆ ಕೂಡ ಸದರಿ ಖರ್ಚುಗಳನ್ನು ಕೊಟ್ಟಿದ್ದಾರೆ. ದಾವಾ ಐಟಂ–2 ಸ್ವತ್ತು 4 ಎಕರೆಯ ಖಾತೆ, ಆರ್.ಟಿ.ಸಿ ಇವತ್ತಿನವರೆಗೂ ನನ್ನ ದೊಡ್ಡಪ್ಪನ ಹೆಸರಿನಲ್ಲಿ ಇದೆ. ದಾವಾ ಐಟಂ–2 ರ ಆರ್.ಟಿ.ಸಿ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಐಟಂ–2 ರ ದಾಖಲೆಗನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ನಾನು 10 ನೇ ತರಗತಿವರಗೊ ಓದಿದ್ದೇನೆ, ನನಗೆ ಕನ್ನಡ ಅಕ್ಷರಗಳು ಹಾಗೂ ಅಂಕಿಗಳನ್ನು ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಈಗ ದಾಖಲೆಯನ್ನು ತೋರಿಲಾಗಿದ್ದು ಅದು ಕಟ್ಟೆ ಹುಣಸೂರಿನ ಸರ್ವೆ ನಂ.121/2 ರ ಆರ್.ಟಿ.ಸಿ ಆಗಿದ್ದು ಅದು 2 ಎಕರೆ ವಿಸ್ತೀರ್ಣ ಇದೆ ಎಂದು ನೋಡಿ ಗುರುತಿಸಿ ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ–1 ಎಂದು ಗುರುತಿಸಲಾಯಿತು. ಸದರಿ ಆರ್.ಟಿ.ಸಿ ಯಲ್ಲಿ ಕಲಂ.9 ಮತ್ತು 12 ರಲ್ಲಿ ಚಿಕ್ಕಗಂಡಯ್ಯ ಬಿನ್ ನಂಜಯ್ಯ ಎಂದು ಇದೆ ಎಂದರೆ ಸರಿ. ಚಿಕ್ಕಗಂಡಯ್ಯ ಬಿನ್ ನಂಜಯ್ಯ ನನ್ನ ತಂದೆ ಎಂದರೆ ಸರಿ. ಸದರಿ ಆರ್.ಟಿ.ಸಿ ಪ್ರಕಾರ ದಾವಾ ಐಟಂ ಸ್ವತ್ತು–2 ಸರ್ವೆ ನಂಬರ್ ನ ವಿಸ್ತೀರ್ಣ 2 ಎಕರೆ ನನ್ನ ತಂದೆ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಆರ್.ಟಿ.ಸಿ ತೋರಿಸಿರುವ 2 ಎಕರೆಯಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಒಟ್ಟು 4 ಎಕರೆಯಲ್ಲಿ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಹೆಸರಿನಲ್ಲಿ ಇರುವ 2 ಎಕರೆ ಜಮೀನಿಗೆ ನಾವು ಕಂದಾಯ ಕಟ್ಟುತ್ತಿಲ್ಲ. ಸರ್ವೆ ನಂ.121 ಒಟ್ಟು 4 ಎಕರೆಯನ್ನು ನನ್ನ ದೊಡ್ಡಪ್ಪ ಹಾಗೂ ನನ್ನ ತಂದೆ ಪೂರ್ವ ಪಶ್ಚಿಮಾಭಿಮುಖವಾಗಿ ಎರಡು ಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಹಾಗೇ ವಿಭಾಗ ಮಾಡಿಕೊಂಡ ಉತ್ತರ ಭಾಗಕ್ಕೆ ಪ್ರತಿವಾದಿಗಳು ಹಾಗೂ ದಕ್ಷಿಣಕ್ಕೆ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ. ಸದರಿ ಆರ್.ಟಿ.ಸಿ ಯಲ್ಲಿ ಎಂ.ಆರ್ 94–95 ಎಂದು ವಿಭಜನೆ ಎಂದು ನಮೂದು ಆಗಿದೆ ಎಂದರೆ ಸರಿ.

5. ಮಂಜುನಾಥ ನನ್ನ ತಮ್ಮ ಮಹದೇವಮ್ಮ ನನ್ನ ತಾಯಿ. ನನ್ನ ತಂದೆ ತೀರಿಕೊಂಡ ಮೇಲೆ ಸರ್ವೆ ನಂ.121/1 ನನ್ನ ತಾಯಿ ಮಹದೇವಮ್ಮ, ನನ್ನ ಹೆಸರಿಗೆ ಹಾಗೂ ನನ್ನ ತಮ್ಮನ ಹೆಸರಿಗೆ ಪೌತಿ ಸಬೂಬು ಖಾತೆ ಎಂ.ಆರ್.ಹೆಚ್–10/2017–18 ರಂತೆ ಆಗಿ ನಮ್ಮ ಮೂವರ ಹೆಸರಿನಲ್ಲಿ ಜಂಟಿ ಖಾತೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಯಾವ ರೀತಿ ಆಗಿರುತ್ತದೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ನಾವು

ಡಾ.ಬಿ.ಆರ್.ಅಂಬೇಡ್ಕರ ಅಭಿವೃದ್ದಿ ನಿಗಮ ನಿಯಮಿತ ಮೈಸೂರು ಇಲ್ಲಿಂದ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ವ್ಯವಸ್ಥಾಪಕಾರು ಕೆ.ಜಿ.ಬಿ ಬ್ಯಾಂಕ್ ಸರಗೂರು ಇವರಿಗೆ ಆಧಾರ ಮಾಡಿ ರೂ.1,89,000/- ಸಾಲ ಪಡೆದು ಬೋರ್ ವೆಲ್ ಹಾಕಿಸಿದ್ದೇನೆ ಎಂದರೆ ಸರಿ. ಅದು ಆರ್.ಟಿ.ಸಿಯಲ್ಲಿ ನಮೂದು ಆಗಿದೆ ಎಂದರೆ ಸರಿ. ಸದರಿ ಅರ್.ಟಿ.ಸಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ಜಮೀನಿನಲ್ಲಿ ನಾನು ನನ್ನ ತಾಯಿ ಹಾಗೂ ನನ್ನ ತಮ್ಮ ಎಲ್ಲಾ ಸೇರಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಹಣ ಸಹಾಯ ಪಡೆದು ಕೊಳವೇ ತೋಡಿಸಿಕೊಂಡು ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**